# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 68 (76) |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 09/12/2024. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು . |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ ಎಷ್ಟು; ಸದರಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಎಷ್ಟು;(ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿನ ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ : 2642<br>ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: 326479<br>ಜಿಲ್ಲಾವಾರು ವಿವರ ಲಗತ್ತಿಸಿದೆ. |
| ಆ) | ಸದರಿ ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳು ಸರ್ಕಾರದ ಬೆಂಬಲದ ಕೊರತೆಯಿಂದಾಗಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ) | ಬಂದಿದ್ದಲ್ಲಿ ಶಾಲೆಗಳ ವರ್ಗೀಕರಣ, ಉಚಿತ ಪಠ್ಯಪುಸ್ತಕ ಸರಬರಾಜು, ಮಧ್ಯಾಹ್ನದ ಪೌಷ್ಟಿಕಾಂಶಯುಕ್ತ ಬಿಸಿಯೂಟ ಪೂರೈಕೆ, ಶಿಕ್ಷಕರಿಗೆ ತರಬೇತಿ, ಕಟ್ಟಡ, ತೆರಿಗೆ-ವಿದ್ಯುತ್ ದರದಲ್ಲಿ ವಿನಾಯಿತಿ ಮಾನ್ಯತೆ ನವೀಕರಣ-ನಿಯಮಗಳ ಸರಳೀಕರಣ, ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕಲ್ಯಾಣ ನಿಧಿ ಸ್ಥಾಪನೆ, ಉಚಿತ ಸಮವಸ್ತ್ರ ನೀಡುವುದು ಸೇರಿದಂತೆ ಸದರಿ ಶಾಲೆಗಳ ಬೇಡಿಕೆ ಮತ್ತು ಸಮಸ್ಯೆಗಳ ಕುರಿತು ಸರ್ಕಾರ ಇದುವರೆಗೆ ಏನು ಕ್ರಮ ವಹಿಸಿದೆ; | • ರಾಜ್ಯದಲ್ಲಿನ ಖಾಸಗಿ ಅನುದಾನರಹಿತ ಶಾಲೆಗಳಿಗೆ ಉಚಿತ ಪಠ್ಯಪುಸ್ತಕ ಸರಬರಾಜು, ಮದ್ಯಾಹ್ನದ ಪೌಷ್ಟಿಕಾಂಶಯುಕ್ತ ಬಿಸಿಯೂಟ ಪೂರೈಕೆ, ಉಚಿತ ಸಮವಸ್ತ್ರ ವಿತರಿಸುವ ಪ್ರಸ್ತಾವನೆ ಇರುವುದಿಲ್ಲ.<br>• ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿಯವರು ಇಲಾಖೆಯ ಡಯಟ್ ಹಾಗೂ ತಾಲ್ಲೂಕು ಹಂತದ ಸಂಪನ್ಮೂಲ ವ್ಯಕ್ತಿಗಳ ಸಹಕಾರವನ್ನು ಪಡೆದುಕೊಳ್ಳಬಹುದಾಗಿದೆ. ತರಬೇತಿ ಆಯೋಜನೆಯ ಖರ್ಚನ್ನು ಸಂಸ್ಥೆಯವರೇ ಭರಿಸುವುದಾದಲ್ಲಿ ಡಯಟ್ ಹಾಗೂ ಬಿಆರ್‌ಸಿ ಕೇಂದ್ರವು ಸಂಪನ್ಮೂಲಗಳನ್ನು ನೀಡಲು ಸಜ್ಜುಗೊಂಡಿದೆ. ತರಬೇತಿ ನೀಡುವಂತೆ ಬೇಡಿಕೆಯನ್ನು ಸಲ್ಲಿಸಿರುವಂತಹ ಆಡಳಿತ ಮಂಡಳಿಯ ಶಾಲಾ ಶಿಕ್ಷಕರಿಗೆ ತರಬೇತಿ ನೀಡಲು ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಿ ಸಹಕಾರವನ್ನು ನೀಡಲಾಗುತ್ತಿದೆ. ಸಂಬಂಧಿಸಿದ ವೆಚ್ಚವನ್ನು |

| | | |
|---|---|---|
| | | ಸದರಿ ಆಡಳಿತ ಮಂಡಳಿಯ ವತಿಯಿಂದ ಭರಿಸಬೇಕಿರುತ್ತದೆ.<br>• ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ, ಬೆಂಗಳೂರು ಈ ಕಛೇರಿಯಿಂದ ನೋಂದಣಿ ಪಡೆದಂತಹ ರಾಜ್ಯದ ಅನುದಾನರಹಿತ ಕನ್ನಡ ಶಾಲೆಗಳ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.<br>1. ವಿಕಲ ಚೇತನ ವಿದ್ಯಾರ್ಥಿಗಳಿಗೆ(CWSN) ಪ್ರೋತ್ಸಾಹ ಧನ ಸಹಾಯ.<br>2. ವಿದ್ಯಾರ್ಥಿಗಳಿಗೆ ವೈದ್ಯಕೀಯ ಧನ ಸಹಾಯ.<br>3. ವಿದ್ಯಾರ್ಥಿಗಳ ಮರಣ ಪರಿಹಾರ ಧನ ಸಹಾಯ.<br>4. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ ಯಲ್ಲಿ ಅತೀ ಹೆಚ್ಚು ಅಂಕ ಪಡೆದ ಕನ್ನಡ ಮಾಧ್ಯಮದ ಜಿಲ್ಲೆಗೆ ತಲಾ 10 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಸಹಾಯ.<br>5. NTSC & NMMS ಪರೀಕ್ಷೆಯಲ್ಲಿ ರಾಷ್ಟ್ರಮಟ್ಟಕ್ಕೆ ಅರ್ಹತೆ ಹೊಂದಿದ 120 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಸಹಾಯ.<br>6. ಶೌರ್ಯ ಪ್ರಶಸ್ತಿ-ಸಾಹಸ ತೋರಿ ಜೀವ ರಕ್ಷಣೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ.<br>7. ರಾಜ್ಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನಗದು ಪುರಸ್ಕಾರ.<br>8. ಶೇಕಡ 100 ಫಲಿತಾಂಶ ಪಡೆದ ಶಾಲೆಗಳಿಗೆ ಮೊಮೆಂಟೊ, ಪ್ರಶಸ್ತಿ ಪತ್ರ ಮತ್ತು ಸನ್ಮಾನ.<br>9. ಪ್ರವಾಸ/ ಕ್ರೀಡೆಗಳಲ್ಲಿ ಭಾಗವಹಿಸಲು ಬರುವ ಶಾಲಾ ವಿದ್ಯಾರ್ಥಿಗಳಿಗೆ ತಂಗಲು ರಿಯಾಯಿತಿ ದರದಲ್ಲಿ ವಸತಿ ಮತ್ತು ಕೊಠಡಿಗಳನ್ನು ನೀಡಲಾಗುವುದು.<br>10. ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳ ಕಟ್ಟಡ ತೆರಿಗೆ-ವಿದ್ಯುತ್ ದರದಲ್ಲಿ ವಿನಾಯಿತಿ ನೀಡಲು ಉದ್ದೇಶಿಸಿರುವುದಿಲ್ಲ.<br>11. ಮಾನ್ಯತೆ ನವೀಕರಣ-ನಿಯಮಗಳ ಸರಳೀಕರಣ, ದಾಖಲೆ/ ಮಾಹಿತಿಗಳ ಸಲ್ಲಿಕೆಯನ್ನು ಕಡಿತಗೊಳಿಸಿದ್ದು, ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದೆ. |

| | | |
|---|---|---|
| ಈ) | ಗ್ರಾಮೀಣ ಭಾಗದಲ್ಲಿಯೇ ಬಹುತೇಕವಾಗಿ ಕೇಂದ್ರೀಕೃತಗೊಂಡು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿರುವ ಈ ಶಾಲೆಗಳ ಸಬಲೀಕರಣಕ್ಕೆ ಸೂಕ್ತ ಯೋಜನೆ ಹಾಗೂ ಪೂರಕ ಕಾರ್ಯಕ್ರಮಗಳನ್ನು ರೂಪಿಸಿ ಯಾವ ಕಾಲಮಿತಿಯೊಳಗೆ ಅನುಷ್ಠಾನಕ್ಕೆ ತರಲಾಗುವುದು? | 1994-95ನೇ ಸಾಲಿನ ಪೂರ್ವದಲ್ಲಿ ಪ್ರಾರಂಭವಾಗಿ ಸತತವಾಗಿ ನಡೆಯುತ್ತಿರುವ ಅರ್ಹ ಖಾಸಗಿ ಕನ್ನಡ ಮಾಧ್ಯಮ ಶಾಲೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಿ ಪ್ರೋತ್ಸಾಹ ನೀಡಲಾಗುತ್ತಿದೆ. |

ಸಂಖ್ಯೆ: ಇಪಿ 391 ಪಿ ಜಿ ಸಿ 2024

(ಎಸ್.ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

- ಅನುಬಂಧ -

**ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು**

| ರಾಜ್ಯದಲ್ಲಿ ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ: 2642 ಸದರಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: 326479 | | |
|---|---|---|
| ಜಿಲ್ಲೆ ಹೆಸರು | ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳ ಮಾಹಿತಿ SATS ಶಾಖೆಯಿಂದ ಪಡೆದಂತೆ | |
| | ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ: | ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆ |
| ಬಾಗಲಕೋಟೆ | 167 | 27762 |
| ಬಳ್ಳಾರಿ | 44 | 6022 |
| ಬೆಳಗಾವಿ | 101 | 13334 |
| ಬೆಳಗಾವಿ ಚಿಕ್ಕೋಡಿ | 303 | 55584 |
| ಬೆಂಗಳೂರು ಗ್ರಾಮೀಣ | 1 | 84 |
| ಬೆಂಗಳೂರು ಉತ್ತರ ನಗರ | 5 | 316 |
| ಬೆಂಗಳೂರು ದಕ್ಷಿಣ ನಗರ | 13 | 736 |
| ಬೀದರ್ | 259 | 26626 |
| ಚಾಮರಾಜನಗರ | 29 | 3002 |
| ಚಿಕ್ಕಬಳ್ಳಾಪುರ | 11 | 675 |
| ಚಿಕ್ಕಮಗಳೂರು | 7 | 398 |
| ಚಿತ್ರದುರ್ಗ | 17 | 1467 |
| ದಕ್ಷಿಣ ಕನ್ನಡ | 20 | 2715 |
| ದಾವಣಗೆರೆ | 51 | 4273 |
| ಧಾರವಾಡ | 39 | 5051 |
| ಗದಗ | 43 | 4853 |
| ಹಾಸನ | 7 | 366 |
| ಹಾವೇರಿ | 39 | 4483 |
| ಕಲಬುರ್ಗಿ | 387 | 38537 |
| ಕೊಡಗು | 2 | 122 |
| ಕೋಲಾರ್ | 4 | 728 |
| ಕೊಪ್ಪಳ | 96 | 9340 |
| ಮಂಡ್ಯ | 23 | 1604 |
| ಮೈಸೂರು | 32 | 2762 |
| ರಾಯಚೂರು | 123 | 12612 |
| ರಾಮನಗರ | 5 | 272 |
| ಶಿವಮೊಗ್ಗ | 23 | 1784 |
| ತುಮಕೂರು | 8 | 310 |
| ತುಮಕೂರು ಮಧುಗಿರಿ | 6 | 508 |
| ಉಡುಪಿ | 13 | 1001 |
| ಉತ್ತರ ಕನ್ನಡ | 6 | 511 |
| ಉತ್ತರ ಕನ್ನಡ ಸಿರಸಿ | 4 | 421 |
| ವಿಜಯನಗರ | 74 | 6777 |
| ವಿಜಯಪುರ | 578 | 81060 |
| ಯಾದಗಿರಿ | 102 | 10383 |
| ಒಟ್ಟು | **2642** | **326479** |

ನಿರ್ದೇಶಕರು[ಪ್ರಾಥಮಿಕ ಶಿಕ್ಷಣ]